**ಸಾಕ್ಷಿಗೆ ದಿನಾಂಕಃ 04.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.RKB ರವರಿಂದಃ**

1) ನಾನು ಈ ಪ್ರಕರಣದಲ್ಲಿ **1** ನೇ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, ಸಿಸಿ ಸಂಖ್ಯೆಃ **27471/2024 (CR No.55/2024)** ಪ್ರಕರಣದ ಆದೇಶದ ಹಾಳೆಯ ಧಡೀಕೃತ ನಕಲನ್ನು ನಿ.ಪಿ.**3** ಎಂದು, ಮತ್ತು ಅಂತಿಮ ವರದಿಯನ್ನು ನಿ.ಪಿ.**4** ಎಂದು, ಮತ್ತು **ಸ್ಥಳ ಪಂಚನಾಮೆಯನ್ನು** ನಿ.ಪಿ.**5** ಎಂದು, **ಕಚ್ಚಾ ನಕ್ಷೆಯನ್ನು** ನಿ.ಪಿ.**6** ಎಂದು, ಐಎಂವಿ ವರದಿಯನ್ನು ನಿ.ಪಿ.**7** ಎಂದು ಗುರುತಿಸಿದೆ.

3) **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್**

ಅನ್ನು ನಿ.ಪಿ.**8** ಎಂದು ಮತ್ತು **ಆ ನೋಟಿಸಿಗೆ ನೀಡಿರುವಂತಹ ಉತ್ತರವನ್ನು** ನಿ.ಪಿ.**9** ಎಂದು**,** ಮತ್ತು ಮತ್ತೊಂದು **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್** ಅನ್ನು ನಿ.ಪಿ.**10** ಎಂದು ಮತ್ತು **ಆ ನೋಟಿಸಿಗೆ ನೀಡಿರುವಂತಹ ಉತ್ತರವನ್ನು** ನಿ.ಪಿ.**11** ಎಂದು ಗುರುತಿಸಿದೆ.

4) ಮುನಿರಾಜು ಎನ್ನುವವರು ಬರೆದುಕೊಟ್ಟಿರುವ **Indemnity bond** ಅನ್ನು ನಿ.ಪಿ.**12** ಎಂದು**, ಗಾಯದ ಪ್ರಮಾಣ ಪತ್ರ**ವನ್ನು ನಿ.ಪಿ.**13** ಎಂದು**, death summary** ಅನ್ನು ನಿ.ಪಿ.**14** ಎಂದು ಗುರುತಿಸಿದೆ.
**<u>ಸೂಚನೆಃ</u>** ನಿ.ಪಿ.**14** ದಾಖಲೆಯು **3** ಹಾಳೆಗಳನ್ನು ಒಳಗೊಂಡಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.14 ಎಂದು ಗುರುತು ಆಗಿರುವ ದಾಖಲೆಗಳು ಮತ್ತೊಂದು ಪ್ರಕರಣದಿಂದ ಪಡೆದುಕೊಂಡಿರುವಂತಹ ಧೃಡೀಕೃತ ನಕಲುಗಳು ಆಗಿವೆ.

5) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ.ಪಿ.**15** ಎಂದು ಗುರುತಿಸಿದೆ.
**<u>ಸೂಚನೆಃ</u>** ನಿ.ಪಿ.**15** ದಾಖಲೆಯು ಒಟ್ಟು **3** ಹಾಳೆಗಳನ್ನು ಒಳಗೊಂಡಿದೆ.

6) ನವೀನ್ ಕುಮಾರ್ ಮರಣ ಪ್ರಮಾಣ ಪತ್ರ ಮತ್ತು ಅವರ ಮೂಲ ಆಧಾರ್ ಕಾರ್ಡ್ ಮತ್ತು ಇತರೆ ಅರ್ಜಿದಾರರ ಮೂಲ ಆಧಾರ್ ಕಾರ್ಡ್ ದಾಖಲೆಗಳು ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು

ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**16** ರಿಂದ ನಿ.ಪಿ.**19** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

7) **Cura** ಆಸ್ಪತ್ರೆಗೆ ನನ್ನ ಗಂಡನಾದ ನವೀನ್ ರವರನ್ನು ದಾಖಲು ಮಾಡಿದ ಬಗ್ಗೆ ಇರುವ ದಾಖಲೆಯನ್ನು ನಿ.ಪಿ.**20** ಎಂದು ಗುರುತಿಸಿದೆ. **Intelli Rose** ಕಂಪೆನಿಯಲ್ಲಿ ನನ್ನ ಗಂಡನಾದ ನವೀನ್ ಕುಮಾರ್ ರವರು ನೌಕರಿ ಮಾಡುತ್ತಿದ್ದರು. ಆ ಬಗ್ಗೆ ಇರುವ ದಾಖಲೆಗಳನ್ನು ನಿ.ಪಿ.**21** ಎಂದು ಗುರುತಿಸಿದೆ.

**<u>ಸೂಚನೆಃ</u>** ನಿ.ಪಿ.**21** ದಾಖಲೆಯು ಒಟ್ಟು **6** ಹಾಳೆಗಳನ್ನು ಒಳಗೊಂಡಿದೆ.

8) **Salary structure** ಎಂಬ ತಲೆಬರಹ ಇರುವ ದಾಖಲೆಯನ್ನು ನಿ.ಪಿ.**22** ಎಂದು, ಮತ್ತು ಸಂಬಳದ ಚೀಟಿಗಳನ್ನು ನಿ.ಪಿ.**23** ರಿಂದ ನಿ.ಪಿ.**25** ಎಂದು ಮತ್ತು **Intelli Rose** ಕಂಪೆನಿಯವರು ನೀಡಿರುವ ಒಂದು ಪ್ರಮಾಣ ಪತ್ರವನ್ನು ನಿ.ಪಿ.**26** ಎಂದು ಗುರುತಿಸಿದೆ.

9) ಒಟ್ಟು **200** ಹಾಳೆಗಳನ್ನು ಒಳಗೊಂಡಿರುವ ಮೆಡಿಕಲ್ ಬಿಲ್ ಹಾಜರುಪಡಿಸಿದ್ದು ಅದನ್ನು ನಿ.ಪಿ.**27** ಎಂದು ಗುರುತಿಸಿದೆ.

10)ಆದ ಕಾರಣದಿಂದ ಪ್ರಾರ್ಥನೆಯಂತೆ ನಮಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.